**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 743/2018**

| | | |
|---|---|---|
| ಸಾಕ್ಷಿದಾರರ ಹೆಸರು | **ಸುರೇಶ** | **ಪ್ರಾಸಾಃ 04** |
| ತಂದೆಯ/ಗಂಡನ ಹೆಸರು | ನಂಜಯ್ಯ | **ಚಾಸಾಃ 07** |
| ವಯಸ್ಸು | 53 ವರ್ಷ | ದಿಃ 05.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ಕೆಲಸ | ವ್ಯಾಪಾರ | |
| ವಾಸ | ಚಿನ್ನದಗುಡಿಹುಂಡಿ ಗ್ರಾಮ | |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿತರ ಪರಿಚಯ ಇದೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಸ್ತುವನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಸುಮಾರು 6-7 ವರ್ಷಗಳ ಹಿಂದೆ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಾಗ ಚಾಸಾ 1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿದ್ದು ನನ್ನ ಹಾಗೂ ಚಾಸಾ 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಸಮಯ ಮಧ್ಯಾಹ್ನ 16 ರಿಂದ 17 ಗಂಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಆಗ ನನ್ನೊಂದಿಗೆ ಚಾಸಾ 6 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪೊಲೀಸರು ಒಂದು ಕಾಡು ಜಾತಿಯ ಮರದ ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆ: ಇಲ್ಲ</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ, ನಂಜನಗೂಡು**